# ಭಾಷಾ ಕಲಿಕೆ ಮತ್ತು ಬೋಧನೆಯ ಮನೋವೈಜ್ಞಾನಿಕ ನಿಯಮಗಳು

**ಜೆ. ರಾಜ ಗುಂಡಾಪುರ**
ಸಹ ಪ್ರಾಧ್ಯಾಪಕರು
ಕನ್ನಡ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ರಾಮನಗರ.

**Article Link: https://aksharasurya.com/2023/12/j-raja-gundapura/**

## ABSTRACT:

ಭಾಷೆಯನ್ನು ಬೆಳಕು, ಜ್ಯೋತಿ ಎನ್ನುತ್ತಾರೆ. ಅಲ್ಲಮನು ತನ್ನ ವಚನವೊಂದರಲ್ಲಿ "ಮಾತೆಂಬುದು ಜ್ಯೋತಿರ್ಲಿಂಗ" ಎಂದಿದ್ದಾರೆ. ಭಾಷೆ ಇಲ್ಲದಿದ್ದರೆ ನಮ್ಮ ಜೀವನ ಕತ್ತಲಲ್ಲಿ ತುಂಬಿರುತ್ತಿತ್ತು. ಆದ್ದರಿಂದಲೇ ದಂಡಿ ಎಂಬ ದಾರ್ಶನಿಕ ಭಾಷೆ ಇಲ್ಲದಿದ್ದರೆ ಜಗತ್ತೇ ಕತ್ತಲೆಯಿಂದ ತುಂಬಿರುತ್ತಿತ್ತೆಂದು ಹೇಳಿದ್ದಾನೆ. ಮನುಷ್ಯನ ವ್ಯವಹಾರ ಆಲೋಚನೆ, ಭಾವನೆಗಳ ಅಭಿವ್ಯಕ್ತಿ–ಇವೆಲ್ಲವೂ ಸಾಧ್ಯವಾಗಿರುವುದು ಭಾಷೆಯಲ್ಲಿ, ಭಾಷೆಯು ಅಭಿವ್ಯಕ್ತಿಯ ಒಂದು ಶಸಕ್ತವಾದ ಶಾಬ್ಧಿಕ ಮಾಧ್ಯಮ. ಮನುಷ್ಯರು ತಮ್ಮ ಬುದ್ಧಿಶಕ್ತಿಯಿಂದ ಭಾಷೆಯನ್ನು ರೂಢಿಸಿಕೊಂಡಿದ್ದಾರೆ. ಭಾಷೆ ಎಂಬುದು ನಿಸರ್ಗದತ್ತವಾದ, ಸಹಜವಾದ ಸ್ವಾಭಾವಿಕ ಕ್ರಿಯೆಯಲ್ಲ. ಒಂದು ನಿರ್ದಿಷ್ಟವಾದ ಪರಿಸರದಲ್ಲಿ ಬಾಲ್ಯದಿಂದ ಕಲಿಯುವುದರಿಂದ ಭಾಷೆ ಬರುತದೆಯೇ ಹೊರತು, ಹುಟ್ಟಿ ನೋಡನೆ ಬರುವುದಿಲ್ಲ. ಭಾಷೆಯು ವ್ಯಕ್ತಿ, ಕುಟುಂಬ, ಸಮುದಾಯ, ಸಮಾಜ ಅಥವಾ ನಿರ್ದಿಷ್ಟ ಪ್ರದೇಶಗಳಲ್ಲಿ, ನಿರ್ದಿಷ್ಟ ಪರಿಸರದಲ್ಲಿ ಪರಸ್ಪರ ಒಪ್ಪಿಗೆ ಮತ್ತು ರೂಢಿಯಿಂದ ಬಂದ ಒಂದು ವ್ಯವಸ್ಥೆಯಾಗಿದೆ.

## KEY WORDS:

ಸ್ಟುರ್ಟೆವಾಂಟ್, ಹಾಕೆಟ್, ಯಾದೃಚ್ಛಿಕತೆ, ಸ್ವಾಲಿತ್ಯ, ಲೀಬ್ನಿಜ್, ಶಾಬ್ಧಿಕ, ಮನೋವೈಜ್ಞಾನಿಕ, ಧ್ವನ್ಯಾಂಗ.

ಅನೇಕ ಭಾಷಾವಿಜ್ಞಾನಿಗಳು ಭಾಷೆಯನ್ನು ಕುರಿತು ಸೂತ್ರರೂಪದಲ್ಲಿ ಹೇಳಲು ಪ್ರಯತ್ನ ಮಾಡಿದ್ದಾರೆ. ಅದರಲ್ಲಿ ಸ್ಟುರ್ಟೆವಾಂಟ್‌ನ ಸೂತ್ರ ಹೆಚ್ಚು ಸಮಂಜಸವಾಗಿದೆ. ಈತನ ಪ್ರಕಾರ ಭಾಷೆಯೆಂದರೆ "ಒಂದು ಸಮಾಜದ ವ್ಯಕ್ತಿಗಳು ಪರಸ್ಪರ ವ್ಯವಹಾರಕ್ಕಾಗಿ ಬಳಸುವ ಯಾದೃಚ್ಛಿಕ ಧ್ವನಿ ಸಂಕೇತಗಳ ವ್ಯವಸ್ಥೆಯೇ ಭಾಷೆ"[1]

ಭಾಷೆ ಧ್ವನಿಸಂಕೇತಗಳ ವ್ಯವಸ್ಥೆ. ಕ್ರಮಬದ್ಧತೆ ಇದ್ದಾಗ ಮಾತ್ರ ಒಬ್ಬರು ಇನ್ನೊಬ್ಬರನ್ನು ಅರ್ಥಮಾಡಿಕೊಳ್ಳಲು ಸಾಧ್ಯ. ಇದು ಕಾಲಾನುಕ್ರಮದಲ್ಲಿ ರೂಢಿಯಿಂದ ಒಂದು ಭಾಷಾ ಸಮಾಜದಲ್ಲಿ ಅಥವಾ ಪ್ರದೇಶದಲ್ಲಿ ನಿಯಮಬದ್ಧವಾಗುತ್ತದೆ. ಭಾಷೆಯು ಒಂದು ಕ್ರಮ, ವ್ಯವಸ್ಥೆಯಿಂದ ರೂಢಿಗತವಾಗಿ ಆ ಭಾಷಾ ಸಮುದಾಯಕ್ಕೆ ತಿಳಿಯುವಂತೆ ಇರುತ್ತವೆ ಎಂದು ಎಂ. ಎಚ್. ಕೃಷ್ಣಯ್ಯನವರು ಹೇಳಿದ್ದಾರೆ. ಭಾಷೆಯ ಗುಣಲಕ್ಷಣಗಳನ್ನು ಕುರಿತು ಅನೇಕ ಚಿಂತನೆ, ಅಧ್ಯಯನಗಳು ನಡೆದಿವೆ. ಈಗಲೂ ನಡೆಯುತ್ತಲಿವೆ. ಆದರೆ, ಬಹಳ ಹಿಂದೆಯೇ ಹಾಕೆಟ್ ಎಂಬಾತ ತಿಳಿಸಿರುವ ಭಾಷೆಯ ಪ್ರಮುಖ ಏಳು ಲಕ್ಷಣಗಳನ್ನು ಬಹಳಷ್ಟು ಭಾಷಾ ವಿಜ್ಞಾನಿಗಳು ಒಪ್ಪಿಕೊಂಡು, ಸಮರ್ಥಿಸಿ ಆ ಲಕ್ಷಣಗಳ ಆಧಾರದ ಮೇಲೆ ಭಾಷಾ ಅಧ್ಯಯನವನ್ನು ನಡೆಸಿದ್ದಾರೆ. ಹಾಕೆಟ್ ಹೇಳುವ ಭಾಷೆಯ ಮುಖ್ಯ ಲಕ್ಷಣಗಳೆಂದರೆ. "ದ್ವಿರೂಪ, ಉತ್ಪಾದಕತೆ, ಯಾದೃಚ್ಛಿಕತೆ, ಅಂತರ್‌ವಿನಿಮಯಕ್ಷತೆ, ವಿಶಿಷ್ಟತೆ ಪರ್ಯಾಯ ಬಳಕೆ ಮತ್ತು ಸಾಂಸ್ಕೃತಿಕ ಪ್ರಸರಣ".[2]

ಒಂದು ಭಾಷೆಯಲ್ಲಿ ಬರುವ ಪದಗಳ, ಪದಕಂತೆಗಳ ಮತ್ತು ವಾಕ್ಯಗಳ ರಚನೆಯಂತಹದು ಎಂಬುದನ್ನು ವಿವರಿಸಿ ಹೇಳುವುದೇ ಆ ಭಾಷೆಯ ಮೇಲೆ ನಾವು ಬರೆಯಬಹುದಾದ ವ್ಯಾಕರಣದ ಮುಖ್ಯ ಉದ್ದೇಶ. ಈ ರಚನೆ ಬೇರೆ ಬೇರೆ ಭಾಷೆಗಳಲ್ಲಿ ಬೇರೆ ಬೇರೆ ತೆರವಾಗಿರುತ್ತದೆ, ಹಾಗಾಗಿ ಬೇರೆ ಬೇರೆ ಭಾಷೆಗಳ ವ್ಯಾಕರಣಗಳೂ ಬೇರೆ ಬೇರೆ ತೆರನಾಗಿರುವುದು ಅತ್ಯವಶ್ಯ[3] ಎಂದು ಡಿ. ಎನ್. ಶಂಕರಭಟ್ ಅವರು ಹೇಳುವ ಮೂಲಕ ಭಾಷೆಯ ಸ್ವರೂಪವನ್ನು ತಿಳಿಸುವುದೇ ವ್ಯಾಕರಣ, ಇದು ಭಾಷೆಯಿಂದ ಭಾಷೆಗೆ ಭಿನ್ನವಾಗಿರುತ್ತದೆ ಎಂದಿದ್ದಾರೆ. ವ್ಯಾಕರಣವೆನ್ನುವುದು ಭಾಷೆಯ ಕುರಿತ ಶಾಸ್ತ್ರವಾದರೂ ಅದು ಭಾಷೆಯನ್ನು ಹೀಗೆಯೇ ಇರಬೇಕೆಂದು ವಿಧಿಸಲಾಗದು. ಏಕೆಂದರೆ ಭಾಷೆಯು ಪರಿವರ್ತನೆಗೆ ಒಳಗಾಗುತ್ತಲೇ ಇರುತ್ತದೆ. ಕೆಲವೊಂದು ಮೂಲಭೂತ ಭಾಷಾ ಘಟಕಗಳು ಅಂ ದರೆ ವಾಕ್ಯರಚನೆ, ಪದರಚನೆ ಯಂತಹವು ಬಹಳ ಬೇಗ ಪರಿವರ್ತನೆಗೆ ಒಳಗಾಗದೆ ಇರಬಹುದಾದರೂ ಭಾಷೆಯೊಂದು ಕಾಲಘಟ್ಟಗಳಲ್ಲಿ ಸಾಮಾಜಿಕ ಚಲನೆಯಲ್ಲಿ ಇತರ ಭಾಷೆಗಳ ಪ್ರಭಾವ, ಸಂಸರ್ಗದಲ್ಲಿ ಬದಲಾವಣೆಗೆ ಒಳಗಾಗುವುದು ಸಹಜ ಪ್ರಕ್ರಿಯೆಯಾಗಿದೆ.

ಹೀಗೆ ತನ್ನ ಮೂಲಗುಣವನ್ನು ಉಳಿಸಿಕೊಂಡೂ ಕಾರ್ಯಕ್ರಮದಲ್ಲಿ ಬದಲಾವಣೆಗೆ ತೆಗೆದುಕೊಂಡೂ ಚಲನಚಿತ್ರವಾಗಿ ಜೀವಂತಿಕೆಯಿಂದಿರುವ ಭಾಷೆಯೊಂದರ ಕಲಿಕೆ ಮತ್ತು ಬೋಧನೆ ಎಂಬುದು ಭಾಷಾ ಪರಿಸರ ಒಂದರಲ್ಲಿ ನಡೆಯುವ ಕ್ರಿಯೆಯಾದರೂ ಅದರ ಹಿನ್ನೆಲೆಗೆ ಅನೇಕ ಮನೋವೈಜ್ಞಾನಿಕ

ನಿಯಮಗಳಿವೆ. ಹೇಗೆಂದರೆ ಹಾಗೆ ಭಾಷೆಯ ಕಲಿಕೆ ಮತ್ತು ಬೋಧನೆ ಎರಡು ಸಾಧ್ಯವಾಗುವುದಿಲ್ಲ. ಭಾಷೆಯೊಂದನ್ನು ಶಾಲೆಗಳಲ್ಲಿ ಕಲಿಸುವಾಗ ಯಾರು ಬೇಕಾದರೂ ಹೇಗೆ ಬೇಕಾದರೂ ಕಲಿಸಬಹುದು ಎಂಬುದು ಒಳ್ಳೆಯದಲ್ಲ. ಭಾಷಾ ಕಲಿಕೆಯಲ್ಲಿ ಒಳಗೊಳ್ಳುವ ಮನೋವೈಜ್ಞಾನಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳನ್ನು, ಹಿನ್ನೆಲೆಗಳನ್ನು ಪರಿಗಣಿಸಬೇಕಾಗುತ್ತದೆ. ಭಾಷಾಕಲಿಕೆ ಹಾಗೂ ಬೋಧನೆಯಲ್ಲಿ ಅಳವಡಿಸಿಕೊಳ್ಳಬಹುದಾದ ನಿಯಮಗಳನ್ನು ತಂತ್ರಗಳನ್ನು ಕುರಿತು ಭಾಷಾಶಾಸ್ತ್ರಜ್ಞರು ದೀರ್ಘಕಾಲ ಸಂಶೋಧನೆ ನಡೆಸಿ ಈ ಕೆಳಗಿನ ಪ್ರಮುಖ ನಿಯಮಗಳನ್ನು ಕಂಡುಕೊಂಡಿದ್ದಾರೆ.

**1. ಸಿದ್ಧಾಂತ ನಿಯಮ:**

ಈ. ಎಲ್. ಥಾರ್ನ್‌ಡೈಕ್‌ನ ಪ್ರಯತ್ನ ಸ್ಖಾಲಿತ್ಯ (Trial and error) ಸಿದ್ಧಾಂತದ ಪ್ರಕಾರ ಕಲಿಕೆಗೆ ಸಿದ್ಧತೆ ಬೇಕು, ವಿವಿಧ ವಯೋಮಾನದ ಮಕ್ಕಳು ವಿವಿಧ ಮಟ್ಟದಲ್ಲಿ ವಿವಿಧ ಭಾಷಾ ಕೌಶಲ್ಯಗಳನ್ನು ಕಲಿಯಲು ಮಾನಸಿಕ, ದೈಹಿಕ ಮತ್ತು ಧ್ವನ್ಯಂಗಗಳ ಸಿದ್ಧತೆಗಳು ಬೇಕು.[4] ಆಲಿಸುವಿಕೆ, ಮಾತು, ಓದು, ಬರಹ ಇತ್ಯಾದಿ ಭಾಷಾ ಕೌಶಲ್ಯಗಳನ್ನು ಸಿದ್ಧತೆ ಇಲ್ಲದೆ ಕಲಿಸಲಾಗುವುದಿಲ್ಲ. ಮಕ್ಕಳಲ್ಲಿ ಆಸಕ್ತಿ ಮೂಡಿಸಿ, ಸಚಿತ್ರಪಟ, ಚಿತ್ರಗಳು, ಧ್ವನಿ ಮುದ್ರಣ, ವರ್ಣಮಾಲೆಯ ಚಾರ್ಟ್‌ಗಳು ಇತ್ಯಾದಿ ಬಳಕೆಯ ಮೂಲಕ ಕಲಿಕೆಯ ಆಸಕ್ತಿ ಮೂಡಿಸಿ ಭಾಷೆ ಕಲಿಸಬೇಕು ಕಲಿಕೆಯ ಆರಂಭದ ಹಂತದಲ್ಲಿ ಮಕ್ಕಳು ತಪ್ಪು ಮಾಡುತ್ತಾ ಕಲಿಯುತ್ತಾರೆ. ಮಕ್ಕಳನ್ನು ಅಭ್ಯಾಸದ ಮೂಲಕ ಭಾಷೆಕಲಿಯಲು ನಾವು ನೆರವಾಗಬೇಕಾಗುತ್ತದೆ.

**2. ಅನುಕರಣೆಯ ನಿಯಮ:**

ಈ ನಿಯಮದ ಪ್ರತಿಪಾದಕ ಲೀಬ್ನಿಜ್ ಎಂಬಾತ[5], ನಿಸರ್ಗದ ನಡುವೆ ಬದುಕ ಬೇಕಿದ್ದ ಮನುಷ್ಯ ನಿಸರ್ಗದಲ್ಲಿನ ಪ್ರಾಣಿ, ಪಕ್ಷಿಗಳ ಕೂಗು, ಶಬ್ದವನ್ನು ಅನುಕರಣೆ ಮಾಡ ತೊಡಗಿದ. ಈ ಅನುಕರಣೆಯಿಂದಲೇ ಭಾಷೆ ರೂಢಿಗೆ ಬಂತು ಎನ್ನುತ್ತಾರೆ. ಇದನ್ನು ಅನೇಕ ಭಾಷಾ ತಜ್ಞರು ತಿರಸ್ಕರಿಸಿದ್ದರು. ಏಕೆಂದರೆ ಒಂದು ಭಾಷೆಯಲ್ಲಿ ಅನುಕರಣ ಶಬ್ದಗಳು ಇರುವುದು ಬಹಳ ಕಡಿಮೆ. ಆದರೆ ಭಾಷೆಯ ಹುಟ್ಟಿನ ಬಗ್ಗೆ ಈ ಅನುಕರಣ ನಿಯಮ ಒಪ್ಪಿತವಲ್ಲದಿದ್ದರೂ ಮಕ್ಕಳು ಭಾಷೆಯನ್ನು ಕಲಿಯುವುದು ಅನುಕರಣೆಯ ಮೂಲಕವೆ. ಅನುಕರಣೆ ಮಕ್ಕಳ ಸಹಜ ಗುಣ, ಒಬ್ಬರು ಮಾತನಾಡುವುದನ್ನು ಕೇಳುತ್ತಾ ಅನುಕರಿಸುತ್ತಾ ಭಾಷೆಯನ್ನು ಕಲಿಯುವುದೇ ಮಕ್ಕಳ ಸ್ವಭಾವ. ಅಲ್ಲದೆ, ಶಾಲೆಗೆ ಸೇರಿದ ಮೇಲೆ ಮಕ್ಕಳು ತನ್ನ ಸಹಪಾಠಿಗಳನ್ನು, ಶಿಕ್ಷಕರನ್ನು ಅನುಸರಿಸಿ ಅವರಂತೆಯೇ ಮಾತನಾಡಲು ಪ್ರಯತ್ನಿಸುವುದನ್ನು ನಾವು ಗಮನಿಸಬಹುದು. ಆದ್ದರಿಂದ ಭಾಷೆಯ ಬೋಧಕರು

ಮಕ್ಕಳು ಉತ್ತಮವಾಗಿ ಭಾಷೆಯನ್ನು ಕಲಿಯುವಂತೆ ಶಾಲೆ ಹಾಗೂ ಮನೆಯ ವಾತಾವರಣವನ್ನು ಸೃಷ್ಟಿಸಬೇಕು.

**3. ಅಭ್ಯಾಸ ನಿಯಮ:**

ಭಾಷಾ ಕಲಿಕೆಯ ಆರಂಭದಲ್ಲಿ ಮಗು ಹಾಡಿದ ಪದವನ್ನೇ ಮತ್ತೆ ಆಡುತ್ತಾ ಗಟ್ಟಿ ಮಾಡಿಕೊಳ್ಳುತ್ತದೆ. ಅಂದರೆ ಅನುಕರಣೆಯಿಂದ ಪ್ರಾರಂಭವಾದ ಭಾಷೆಯ ಕಲಿಕೆ ಅಭ್ಯಾಸದಿಂದ ಗಟ್ಟಿಗೊಳ್ಳುತ್ತದೆ. ಮಾತು, ಓದು, ಬರಹದಂತಹ ಕೌಶಲ್ಯಗಳು ಅಭ್ಯಾಸದಿಂದಲೇ ಸ್ಥಿರಗೊಳ್ಳುತ್ತವೆ. ಆದುದರಿಂದ ಭಾಷಾ ಕೌಶಲ್ಯಗಳನ್ನು ಸೂಕ್ತ ಅಭ್ಯಾಸಗಳು ಚಟುವಟಿಕೆಗಳ ಮೂಲಕ ಕಲಿಸಬೇಕು.

**4. ಭಾಷೆಯನ್ನು ಪುನರ್ಬಲನ ಗೊಳಿಸುತ್ತಾ ಕಲಿಸಬೇಕು:**

ಬಿ.ಎಫ್. ಪ್ರಕಾರ ಪುನರ್ಬಲನವು ಕಲಿಕೆಯನ್ನು ಸ್ಥಿರಗೊಳ್ಳುತ್ತದೆ. ಮಕ್ಕಳು ಭಾಷೆ ಕಲಿಯುತ್ತಾ ಬಳಸುವಾಗ ಕಂಡುಬರುವ ಸರಿ ತಪ್ಪುಗಳನ್ನು ಗುರುತಿಸಿ ಅವಶ್ಯಕ ಪುನರ್ಬಲನದೊಂದಿಗೆ ಕಲಿಕೆಯನ್ನು ಕ್ರಮಬದ್ಧಗೊಳಿಸಬೇಕು ಪುನರ್ಬಲನವೆಂದರೆ ತಪ್ಪುಗಳು ಕಂಡು ಬಂದಾಗ ಗುರುತಿಸಿ ತಿದ್ದುವುದು ಸರಿಯಾದದ್ದನ್ನು ಅಥವಾ ಉತ್ತಮ ಕಲಿಕೆ ಕಂಡು ಬಂದಾಗ ಪ್ರಶಂಶಿಸುವುದು ಆ ಮೂಲಕ ಭಾಷೆ ಕಲಿಕೆಗೆ ಸೂಕ್ತ ಮಾರ್ಗದರ್ಶನ ನೀಡಬೇಕು.

**5. ಭಾಷೆಯನ್ನು ಸ್ವಾಭಾವಿಕ ಕ್ರಮದಲ್ಲಿ ಕಲಿಸಬೇಕು:**

ಅಂದರೆ ಸರಳವಾಗಿ ಕಲಿಸಬೇಕು. ಸರಳತೆಯಿಂದ ಸಂಕೀರ್ಣತೆಯ ಕಡೆಗೆ ಎಂಬಂತೆ ಮೊದಲು ಆಲಿಸುವಿಕೆ, ನಂತರ ಮಾತು, ಆಮೇಲೆ ಓದು ಬರಹಗಳನ್ನು ಕಲಿಸಬೇಕು. ಸ್ವಾಭಾವಿಕ ಕ್ರಮದಲ್ಲಿ ಮುಕ್ತ ವಾತಾವರಣದಲ್ಲಿ ಸ್ವಯಂ ಕಲಿಕೆಯನ್ನು ಪ್ರೋತ್ಸಾಹಿಸಬೇಕು.

**6. ಜೀವಂತ ಸಂದರ್ಭಗಳು ಹಾಗೂ ಸನ್ನಿವೇಶಗಳಲ್ಲಿ ಕಲಿಸಬೇಕು:**

ಮಕ್ಕಳು ಭಾಷೆಯನ್ನು ನಿರ್ಜನ ಪ್ರದೇಶದಲ್ಲಿ ಒಬ್ಬಂಟಿಯಾಗಿ ಕಲಿಯಲು ಸಾಧ್ಯವಾಗುವುದಿಲ್ಲ. ಸ್ವಾಭಾವಿಕವಾಗಿ ಪರಿಸರದ ಭಾಗವಾಗಿಯೇ ಸಾಂಧರ್ಬಿಕ ಸನ್ನಿವೇಶಗಳ ಫಲವಾಗಿ ಮುಕ್ತ ವಾತಾವರಣದಲ್ಲಿ ಭಾಷೆಯ ಕಲಿಕೆಯು ಸುಲಭ ಮತ್ತು ಪರಿಣಾಮಕಾರಿ. ಭಾಷೆ ಕಲಿಕೆ ಜೀವಂತ ಪರಿಸರದಲ್ಲಿ ಎಂದಾಗ ಮಗು ಹೊಸ ಪದ ಒಂದನ್ನು ಕಲಿಯುವಾಗ ಅದನ್ನು ಉಚ್ಚರಿಸಿ, ಹೇಳಿಸಿ, ಬರೆಸಿದರೆ ಸಾಲದು, ಆ ಹೊಸ ಪದದ ಅರ್ಥ ಅದರ ಬಳಕೆಯ ಸಂದರ್ಭವನ್ನು ತಿಳಿಸುತ್ತಾ, ವಸ್ತು, ಚಿತ್ರ, ಘಟನೆ ಹಾಡಿನ ಮೂಲಕ ಆ ಹೊಸ ಪದದ ಅರ್ಥ ಮಗುವಿಗೆ ಅರ್ಥವಾಗುವಂತೆ ಮಾಡಬೇಕು.

**7. ಭಾಷೆಯನ್ನು ಅರ್ಥಪೂರ್ಣ ವಾಕ್ಯಗಳ ಮೂಲಕ ಕಲಿಸಬೇಕು:**

ಭಾಷೆಯೊಂದರ ಮೂಲ ಘಟಕ ಶಬ್ಧ ಪದಗಳು ಆದರೂ ಅವುಗಳ ಬಳಕೆ ವಾಕ್ಯವೊಂದರಲ್ಲಿ ಕ್ರಮಬದ್ಧವಾಗಿ ಬಳಸಿದಾಗ ಮಾತ್ರ ಆ ಪದ, ಶಬ್ದಕ್ಕೆ ಅರ್ಥ ಸ್ಪುರಿಸುತ್ತದೆ. ಆದ್ದರಿಂದ ಗೆಸ್ಟಾಲ್ಟ್ ಪಥದ ಮನೋವಿಜ್ಞಾನಿಗಳ ಪ್ರಕಾರ ಯಾವುದೇ ವಿಷಯವನ್ನು ಸಮಗ್ರವಾಗಿ ಪೂರ್ಣ ದೃಷ್ಟಿಯಲ್ಲಿ ಕಲಿಸಬೇಕು. ಬಿಡಿ ಬಿಡಿಯಾಗಿ ಕಲಿಸಿದರೆ ಕಲಿಕೆ ಅರ್ಥಪೂರ್ಣವಾಗುವುದಿಲ್ಲ[6] ಮಗು ಕೆಲವು ಪದಗಳನ್ನಷ್ಟೆ ಕಲಿತರೆ ಸಾಲದು. ಆ ಪದಗಳನ್ನು ಬಳಸಿ ವಾಕ್ಯ ಮಾಡಬೇಕು ಆ ವಾಕ್ಯವು ಅರ್ಥ ಪೂರ್ಣವಾಗಿರಬೇಕು. ಹೀಗೆ ಅರ್ಥ, ಶಬ್ದ, ವಾಕ್ಯಗಳ ಮೂಲಕ ಪ್ರಾರಂಭಿಸಿ ನಂತರ ಪದಗಳು ಅಕ್ಷರಗಳ ಜ್ಞಾನವನ್ನು ಕೊಡಬೇಕು.

**8. ಭಾಷೆಯನ್ನು ಸಂವಹನದ ಮೂಲಕ ಕಲಿಸಬೇಕು:**

ಭಾಷೆಯನ್ನು ಮಾತಾಡುತ್ತಾ ಹೇಳುತ್ತಾ, ಪ್ರಶ್ನೆ ಕೇಳಿ ಉತ್ತರ ಪಡೆಯುತ್ತಾ ಹೀಗೆ ಸಂವಹನದ ಮೂಲಕ ಸಹಜವಾಗಿ ಭಾಷಾ ಕಲಿಕೆಯಾಗಬೇಕು ಮಾತಿನ ಮೂಲಕವೇ ಮಾತು, ಬರಹದ ಮೂಲಕ ಬರಹ ಎಂಬಂತೆ ಕಥೆ, ಸಂಭಾಷಣೆ, ಚರ್ಚೆಗಳ ಮೂಲಕ ಭಾಷೆಯನ್ನು ಸಂವಹಿಸುತ್ತಾ ಕಲಿಸಬೇಕು. ಮೊದಲಿಗೆ ಮಾತನಾಡುವುದು, ಆಲಿಸುವುದು ಹಾಗೆ ಆಲಿಸಿದ್ದನ್ನು ಮಾತನಾಡುವುದು, ಎಂದೇ ಆಲಿಸಿದ ಪದ, ವಾಕ್ಯವನ್ನು ಮತ್ತೊಂದು ಸಂದರ್ಭ, ಸನ್ನಿವೇಶದಲ್ಲಿ ಮತ್ತೊಂದು ರೀತಿ ಬಳಸುವುದು ಹೀಗೆ ಭಾಷೆ ಕಲಿಕೆ ಮತ್ತು ಬಳಕೆ ಸಾಗುತ್ತದೆ.

**9. ಭಾಷೆಯನ್ನು ಅನುಕ್ರಮಣಿಕೆಯಲ್ಲಿ ಕಲಿಸಬೇಕು:**

ಭಾಷೆ ವ್ಯವಸ್ಥಿತವಾದ ಒಂದು ಶಾಬ್ಧಿಕ ವ್ಯವಸ್ಥೆ. ಅದನ್ನು ಹೇಗೆಂದರೆ ಹಾಗೆ ಕಲಿಸಬಾರದು, ಸರಳ ಪದಗಳಿಂದ, ಸಣ್ಣ ಸಣ್ಣ ವಾಕ್ಯಗಳಿಂದ ಆರಂಭಿಸಿ ಕ್ರಮೇಣ ಸಂಕೀರ್ಣ ವಾಕ್ಯಗಳನ್ನು ಕ್ಲಿಷ್ಟ ಪದಗಳನ್ನು ಕಲಿಸಬೇಕು. ಮಾತು ಕಲಿತ ನಂತರ ಓದುವುದು, ಪರಿಚಿತ ಪದಗಳಿಂದ ಅಪರಿಚಿತ ಪದಗಳ ಕಡೆಗೆ ಕಲಿಸಬೇಕು. ಸಂಭಾಷಣೆ ಮೂಲಕ ಮಾತುಗಾರಿಕೆ ಕಲಿಸಬೇಕು.

**10. ಮಕ್ಕಳಲ್ಲಿ ಆಸಕ್ತಿ ಮೂಡಿಸಿ ಕಲಿಸಬೇಕು:**

ಇದು ಬಹಳ ಮುಖ್ಯವಾದದ್ದು ಮಕ್ಕಳಿಗೆ ಕಲಿಯುವ ಆಸಕ್ತಿ ಇಲ್ಲದಿದ್ದರೆ ಬೋಧನೆ ಸಫಲವಾಗುವುದಿಲ್ಲ. ಮೊದಲಿಗೆ ಮಕ್ಕಳಲ್ಲಿ ಭಾಷಾ ಕಲಿಕೆಯ ಆಸಕ್ತಿ ಮೂಡಿಸಬೇಕು. ಮುಕ್ತ ವಾತಾವರಣ ಕಲಿಕಾ ಸಾಮಗ್ರಿಗಳನ್ನು, ಮಾದರಿಗಳನ್ನು ಒದಗಿಸಿ ಭಾಷಾ ಆಟಗಳು, ಹಾಡುಗಳು, ಪಟಾಣಿ ಕಥೆ, ಕವನ ಇತ್ಯಾದಿಗಳಿಂದ ಮಕ್ಕಳ ಆಸಕ್ತಿಯನ್ನು ಸೆಳೆದು ಆಕರ್ಷಕವಾದ ರೀತಿಯಲ್ಲಿ ಭಾಷೆಯನ್ನು ಕಲಿಸಬೇಕು.

ಭಾಷೆ ಕಲಿಕೆಯು ಮಕ್ಕಳಿಗೆ ಹೊರೆ ಎನಿಸದಂತೆ ಮಕ್ಕಳೇ ಸ್ವಯಂ ಆಸಕ್ತಿಯಿಂದ ಭಾಷೆ ಕಲಿಯಲು ವಾತಾವರಣ ಸೃಷ್ಟಿಸಿ ಅವರಿಗೆ ನೆರವಾಗಬೇಕು.

ಭಾಷೆಯನ್ನು ಕಲಿಸುವಾಗ ಭಾಷೆ ಕಲಿಯುವ ಮಕ್ಕಳ ಸಹಜ ಪ್ರವೃತ್ತಿ, ವಯಸ್ಸು ಭಾಷೆಯ ಸಾಮಾಜಿಕ, ಸಾಂಸ್ಕೃತಿಕ ನೆಲೆಯನ್ನು ತಿಳಿದು ಭಾಷೆ ಭಾಷೆಗಾಗಿಯಲ್ಲ, ಮಕ್ಕಳ ಸರ್ವಾಂಗೀಣ ವಿಕಾಸಕ್ಕಾಗಿ ಭಾಷೆಯನ್ನು ಕಲಿಸಬೇಕೆಂದು ಅನಸೂಯ ವಿ. ಪರಗಿಯವರು[7] ಹೇಳುವ ಮಾತುಗಳು ಸಮಂಜಸವಾಗಿದೆ. ಹೀಗೆ ಈ ಮೇಲ್ಕಂಡ ಅನೇಕ ಮನೋವೈಜ್ಞಾನಿಕ ನಿಯಮಗಳು ಭಾಷಾ ಕಲಿಕೆ ಮತ್ತು ಬೋಧನೆಯ ಹಿನ್ನೆಲೆಯಾಗಿದ್ದು ಇವುಗಳ ತಿಳುವಳಿಕೆ ಭಾಷಾ ಬೋಧಕರಿಗೆ ಅಗತ್ಯವಾಗಿದೆ. ಚಾರ್ಲ್ಸ್ ಡಾರ್ವಿನ್ "ಮಾನವ ಪ್ರಪಂಚದ ಅವಿಷ್ಕಾರಗಳಲ್ಲೆಲ್ಲಾ ಭಾಷೆಯ ಉಪಯೋಗಿ ಆವಿಷ್ಕಾರದಷ್ಟು ಅದ್ಭುತವಾದದ್ದು, ಮಹತ್ವಪೂರ್ಣವಾದದ್ದು ಬೇರೊಂದು ಇಲ್ಲ"[8] ಎಂದು ಭಾಷೆಯ ಸಾಮರ್ಥ್ಯ ವನ್ನು ಕುರಿತು ಹೇಳಿದ್ದಾನೆ. ಜ್ಞಾನದ ಸಂಕೇತವೆನಿಸಿದ ಅಗ್ನಿ ಮಾನವನ ಮೊದಲ ಆವಿಷ್ಕಾರ, ಭಾಷೆ ಎರಡನೆಯದು ಅಲ್ಲಿಯ ಅವಿನಾಭಾವದಿಂದ ಅವನಲ್ಲಿ ಜ್ಞಾನ ಅವತರಿಸಿತು. ಭಾಷೆಯ ಒಡನಾಟದಿಂದ ಅವನಿಗೆ ಅಭಿವ್ಯಕ್ತಿ ಸಾಧ್ಯವಾಯಿತೆಂದು ಡಾ. ಸಾ.ಶಿ. ಮರುಳಯ್ಯ ಹೇಳುತ್ತಾರೆ. ಭಾಷೆ ಮಾನವನ ಅತ್ಯಮೂಲ್ಯ ಸಾಧನೆಗಳಲ್ಲಿ ಒಂದು, ಭಾಷೆ ನೈಸರ್ಗಿಕ ಕ್ರಿಯೆ ಅಲ್ಲದಿದ್ದರೂ ಭಾಷಾ ಕಲಿಕೆಯ ನಂತರ ಅದು ನೈಸರ್ಗಿಕವೇನೋ ಎಂಬಂತೆ ನಿರರ್ಗಳವಾಗಿ, ಸುಲಲಿತವಾಗಿ ಸಂವಹನದ ಮಾಧ್ಯಮವಾಗಿ ಕಾರ್ಯನಿರ್ವಹಿಸುತ್ತದೆ.

ಭಾಷೆಯೊಂದರ ಕಲಿಕೆಯಲ್ಲಿ ಪ್ರಮುಖ ಪಾತ್ರವಹಿಸುವುದು ಶಬ್ದಕೋಶ. ಒಂದು ಭಾಷೆಯ ವ್ಯವಹಾರ ನಡೆಯುವುದೇ ಶಬ್ದಕೋಶದ ಬಲದಿಂದ. ಶಬ್ದಕೋಶವೆಂಬುದು ಶಬ್ದಗಳ ಭಂಡಾರ. ಶಬ್ದವೆಂದರೆ ಮಾತಿನಲ್ಲಿ ವ್ಯಕ್ತಪಡಿಸಬಹುದಾದ ಅತಿಕನಿಷ್ಟ ಆಲೋಚನಾಂಶವೆಂದು ಬಹುಕಾಲದ ರೂಢಿಯಿಂದ ಅಂಗಿಕೃತವೂ, ನಿರ್ದಿಷ್ಟವೂ ಆದ ಅರ್ಥವನ್ನುಳ್ಳ ಸ್ವನ ಸಮೂಹವೆಂದೂ ಮುಂತಾಗಿ ಅದನ್ನು ಪರಿಗಣಿಸಲಾಗುತ್ತದೆ ಎಂದು ಡಾ. ಟಿ. ವಿ. ವೆಂಕಟಚಲ ಶಾಸ್ತ್ರಿಯವರು ಹೇಳುತಾ[9] ಭಾಷೆಯೊಂದಕ್ಕೆ ತನ್ನದೇ ಆದ ಶಬ್ದಕೋಶವಿರುತ್ತದೆ ಎನ್ನುತ್ತಾರೆ. ಭಾಷಾ ಕಲಿಕೆ ಮತ್ತು ಬೋಧನೆಯ ಸಂದರ್ಭದಲ್ಲಿ ಮಕ್ಕಳಲ್ಲಿ ಭಾಷಾ ಕಲಿಕೆ ಮತ್ತು ಬಳಕೆಯನ್ನು ಸಮರ್ಥವಾಗಿ ಕಲಿಸುವುದೆಂದರೆ ಶಬ್ದಕೋಶ ಅಥವಾ ಶಬ್ದ ಭಂಡಾರವನ್ನು ಅವರು ಒಳಗೊಳ್ಳುವಂತೆ ಮಾಡುವುದು. ಸಹಜವಾಗಿಯೇ ಭಾಷಾಪರಿಸರದಲ್ಲಿ ಮಗು ಶಬ್ದಗಳನ್ನು ಆಲಿಸುತ್ತಾ ಉಚ್ಚರಿಸುತ್ತಾ, ವಯೋಮಾನಕ್ಕೆ ಅನುಗುಣವಾಗಿ ತನ್ನದೇ ಆದ ಶಬ್ದ ಭಂಡಾರವನ್ನು ಹೊಂದಿರುತ್ತದೆ. ಈ ಶಬ್ದ

ಭಂಡಾರ ವಿಫಲವಾಗದಂತೆ ಭಾಷಾ ಬೋಧನೆ ಇರಬೇಕು.

ಮಕ್ಕಳಲ್ಲಿ ಭಾಷಾ ಕಲಿಕೆಯ ಆರಂಭವು ಮಾತಿನ ಉತ್ಪತ್ತಿ, ಮಾತಿನ ಗ್ರಹಿಕೆ, ಮಾತಿನ ಪರಸ್ಪರ ಸಂವಹನ ಕ್ರಿಯೆ ಈ ಮೂರು ಹಂತಗಳಲ್ಲಿ ನಡೆಯುತ್ತದೆ[10] ಎಂದು ಕೆ. ವಿ. ನಾರಾಯಣ ಅವರು ಗುರುತಿಸಿದ್ದಾರೆ. ಈ ಮೂರು ಹಂತಗಳ ಮೂಲಕ ಭಾಷಾ ಕಲಿಕೆಯನ್ನು ಮಗು ಸಮರ್ಥವಾಗಿ ಸಾಧಿಸಿ ಕೊಳ್ಳುವುದನ್ನು ಅವರು ವಿವರಿಸುತ್ತಾರೆ.

ಮೊದಲಿಗೆ ಮಾತಿನ ಉತ್ಪತ್ತಿಗೆ ಧ್ವನ್ಯಾಂಗಗಳ ಬೆಳವಣಿಗೆಯಾಗಬೇಕು, ನಂತರ ಮಾತಿನ ಗ್ರಹಿಕೆಗೆ ಮಗುವಿನ ಗ್ರಹಿಕೆಯ ಅವಧಿ ಹುಟ್ಟಿನಿಂದ ಆರಂಭವಾದರೂ ಹಂತ ಹಂತವಾಗಿ ಅದು ಬೆಳೆಯುತ್ತಾ ಸಾಗುತ್ತದೆ. ನಂತರ ಮಾತಿನ ಪರಸ್ಪರ ಸಂವಹನ ಕ್ರಿಯೆ ನಡೆಯುತ್ತದೆ. ಭಾಷೆಯನ್ನು ಕಲಿಸುವ ಹಂತದಲ್ಲಿ ಶಾಲೆಗಳಲ್ಲಿ ಭಾಷಾ ಬೋಧಕರು ಭಾಷೆಯ ಅಂಗಗಳನ್ನು, ಅವುಗಳ ಸ್ವರೂಪವನ್ನು ಪರಿಚಯಿಸುವ ವ್ಯಾಕರಣವನ್ನು ಕಲಿಸುತ್ತಾರೆ. ಈ ವ್ಯಾಕರಣ ಅಂಶಗಳನ್ನು ನಾವು ಹೇಗೆ ಕಲಿಸಬೇಕು ಎಂಬುದನ್ನು 'ಕನ್ನಡ ಮಾಧ್ಯಮ ವ್ಯಾಕರಣ' ಕೃತಿಯನ್ನು ಬರೆದ ತೀ. ನಂ. ಶ್ರೀಕಂಠಯ್ಯವರು ಹೀಗೆ ಹೇಳಿದ್ದಾರೆ. "ವ್ಯಾಕರಣ ಗ್ರಂಥವು ಕೇವಲ ಸೂತ್ರಗಳ ಪಟ್ಟಿಯಾಗಿರಬಾರದು. ಅದರಲ್ಲಿ ಸೂತ್ರಕ್ಕಿಂತ ಹೆಚ್ಚಾಗಿ ವಿವರಣೆಯೂ, ವಿವರಣೆಗಿಂತ ಹೆಚ್ಚಾಗಿ ಉದಾರಣೆಯೂ ಬಂದರೆ, ಪಾಠವನ್ನು ಓದತಕ್ಕ ವಿದ್ಯಾರ್ಥಿಗಳಿಗೆ ಆಸಕ್ತಿಯು ಬೆಳೆಯುತ್ತದೆ" ಎಂಬ ಮಾತುಗಳು ಭಾಷೆಯನ್ನು ಕಲಿಸುವ ವೈಜ್ಞಾನಿಕ ನಿಯಮದಿಂದ ಕೂಡಿದ್ದು ಈ ನಿಯಮವನ್ನು ಆಧರಿಸಿಯೇ ಅವರು 'ಕನ್ನಡ ಮಧ್ಯಮ ವ್ಯಾಕರಣ'ದಂತಹ ಅಮೂಲ್ಯವಾದ ವ್ಯಾಕರಣ ಗ್ರಂಥ ವನ್ನು ಬರೆದಿದ್ದಾರೆ. ಈ ವಿಚಾರಗಳೆಲ್ಲವೂ ಭಾಷಾ ಕಲಿಕೆ ಮತ್ತು ಬೋಧನೆಗೆ ನೆರವಾಗುವ ಅಂಶಗಳಾಗಿವೆ.

ಭಾಷಾ ಬೋಧನೆಯು ಒಂದು ಶಾಸ್ತ್ರೀಯ ಶಿಸ್ತಾಗಿರುವುದರಿಂದ ಅದೊಂದು ಮನೋವೈಜ್ಞಾನಿಕ ನಿಯಮಗಳನ್ನು ಅನುಸರಿಸಿ ನಡೆಸಬೇಕಾದ ಕ್ರಿಯೆಯಾಗಿರುವುದರಿಂದ ಭಾಷಾ ಬೋಧಕರಿಗೆ ಕೆಲವು ಅರ್ಹತೆ ಸಾಮರ್ಥ್ಯಗಳಿರಬೇಕಾಗುತ್ತದೆ. ಶಾಲೆಗಳಲ್ಲಿ ಭಾಷೆಯೊಂದನ್ನು ಬೋಧಿಸುವ ಬೋಧಕರಿಗೆ ಇರಬೇಕಾದ ಅರ್ಹತೆಗಳು, ಸಾಮರ್ಥ್ಯಗಳು, ಗುಣ, ಸ್ವಭಾವಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಬಹುದು.[11]

» ಶೈಕ್ಷಣಿಕ ಅರ್ಹತೆಗಳು.
» ಭಾಷಾ ಬೋಧನಾ ಕೌಶಲ್ಯಗಳಲ್ಲಿ ಸಾಮರ್ಥ್ಯ ಹೊಂದಿರಬೇಕು.

» ಉತ್ತಮ ಭಾಷಾ ಸಾಮರ್ಥ್ಯ ಹೊಂದಿರಬೇಕು.
» ಸಾಹಿತ್ಯಜ್ಞಾನ ಹಾಗೂ ಸಾಹಿತ್ಯ ಅಭಿರುಚಿ ಹೊಂದಿರಬೇಕು.
» ಭಾಷೆಯ ಬಗ್ಗೆ ಅಭಿಮಾನ ಮತ್ತು ಗೌರವ ಇರಬೇಕು.
» ಇತರ ಭಾಷೆಗಳ ಬಗ್ಗೆ ಅವಶ್ಯಕ ಜ್ಞಾನ ಇರಬೇಕು.
» ಅಧ್ಯಯನ ಶೀಲತೆ, ವೃತ್ತಿ ಪರಿಣತಿ ಮತ್ತು ವೃತ್ತಿ ಗೌರವ ಇರಬೇಕು.
» ವಿವಿಧ ಇಲಾಖೆ, ಅಕಾಡೆಮಿಗಳು, ಸಂಸ್ಥೆಗಳೊಡನೆ ಸಂಪರ್ಕವಿರಬೇಕು.
» ಸಮೂಹ ಮಾಧ್ಯಮಗಳ ಅನುಕೂಲ ಪಡೆಯಬೇಕು.
» ವಿಷಯ ಜ್ಞಾನದಲ್ಲಿ ಪರಿಣಿತ ಹೊಂದಿರಬೇಕು
» ಓದುವ ಹವ್ಯಾಸ, ಸಾಹಿತ್ಯ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ರೂಪಿಸುವ ಸಾಮರ್ಥ್ಯ ಬೇಕು.
» ಕಲಿಕಾ, ಬೋಧನಾ ಉಪಕರಣಗಳನ್ನು ಬಳಸುವ ಜಾಣ್ಮೆ ಇರಬೇಕು.
» ಶೈಕ್ಷಣಿಕ ತಂತ್ರಜ್ಞಾನದಲ್ಲಿ ಅಗತ್ಯ ಪರಿಣತಿ, ಕ್ರಿಯಾ ಸಂಶೋಧನೆ ಕೈಗೊಳ್ಳುವ ಸಾಮರ್ಥ್ಯ ಬೇಕು.
» ಸಮಾಜದೊಡನೆ ಉತ್ತಮ ಬಾಂಧವ್ಯ, ಉತ್ತಮ ಸಂವಹನ ಕೌಶಲ, ಇತರ ವಿಷಯಗಳ ಬಗ್ಗೆ ತಿಳುವಳಿಕೆ ಇರಬೇಕು.

ಈ ಮೇಲಿನ ಗುಣ ಸ್ವಭಾವ ಅರ್ಹತೆಗಳಿರುವವರು ಭಾಷಾ ಭೋಧಕರಾದರೆ ಭಾಷಾ ಕಲಿಕೆಯು ಪರಿಣಾಮಕಾರಿಯಾಗಿರುತ್ತದೆ.

ಭಾಷೆಯು ಕೇವಲ ಸಂವಹನ ಮಾಧ್ಯಮವಾಗಿರದೆ ವ್ಯಕ್ತಿಯ ವ್ಯಕ್ತಿಗತ ಬೆಳವಣಿಗೆ ಸಹಕಾರಿಯಾಗಿದ್ದು ವ್ಯಕ್ತಿತ್ವ ವಿಕಸನಕ್ಕೆ ಸಹಾಯಕವಾದದ್ದು ಅಲ್ಲದೆ, ಸಮಾಜದಲ್ಲಿ ಉತ್ತಮ ಸ್ಥಾನಮಾನ ಪಡೆಯಲು ವ್ಯಕ್ತಿ ಬಳಸುವ ಭಾಷೆಯು ಪ್ರಮುಖ ಕಾರಣವಾಗಿರುವುದರಿಂದ ಭಾಷಾ ಕಲಿಕೆ ಬೋಧನೆಯನ್ನು ಕೇವಲವಾಗಿ ಪರಿಗಣಿಸಬಾರದು. ಈ ನಿಟ್ಟಿನಲ್ಲಿ ಮನೆಯೆ ಮೊದಲ ಪಾಠಶಾಲೆ ತಾಯಿಯೇ ಮೊದಲ ಗುರು ಎಂಬಂತೆ ಮಗು ಭಾಷೆ ಕಲಿಯುವ ಪರಿಸರ ಮೊದಲಿಗೆ ಬದಲಾಗುವುದೇ ಮನೆಯಲ್ಲಿ. ಆದ್ದರಿಂದ ಮನೆಯ ಸದಸ್ಯರು ಮಗುವು ಭಾಷೆಯೊಂದನ್ನು, ಅದರಲ್ಲೂ ಮಾತೃಭಾಷೆಯನ್ನು ಮೊದಲಿಗೆ ಕಲಿಯಲು ನೆರವಾಗಬೇಕು. ಕಲಿಕೆಯ ವಾತಾವರಣವನ್ನು ಸೃಷ್ಟಿಮಾಡಬೇಕು, ಮಗುವಿನೊಂದಿಗೆ ಹೆಚ್ಚು ಸಂವಹನ, ಮಾತುಕತೆ, ಪ್ರಶ್ನೆಕೇಳುವುದು, ಹಾಗೆ ಕೇಳುವುದನ್ನು ಉತ್ತೇಜಿಸುವುದು ಈ ಬಗೆಯ ಸಂವಹನದಂತಹ ಚಟುವಟಿಕೆಗಳ ಮೂಲಕ ಭಾಷೆ ಕಲಿಯಲು ನೆರವಾಗಬೇಕು.

ಶಾಲೆಗಳಲ್ಲಿಯೂ ಭಾಷಾಬೋಧನೆಯನ್ನು ಮಾಡುವ ಶಿಕ್ಷಕರು ಸ್ಪಷ್ಟವಾಗಿ, ಸರಳವಾಗಿ ಮಾತನಾಡುವುದರ ಮೂಲಕ ಮೊದಲಿಗೆ ಮಕ್ಕಳಲ್ಲಿ ಭಾಷಾ ಕಲಿಕೆಯ

ಆಸಕ್ತಿಯನ್ನು ಮೂಡಿಸಿ, ಕಲಿಕೆಯ ವಾತಾವರಣವನ್ನು ರೂಪಿಸಿ, ಸ್ವಯಂ ಕಲಿಕೆ ಸಾಧ್ಯವಾಗುವ ಎಲ್ಲಾ ಬಗೆಯ ಸಿದ್ಧತೆಗಳನ್ನು ಮಾಡಿ, ಭಾಷಾ ಕಲಿಕೆಗೆ ನೆರವಾಗಬೇಕು. ಮಗು ಎಲ್ಲಾ ಬಗೆಯ ಜ್ಞಾನವನ್ನು, ಆಲೋಚನೆಯನ್ನು ಭಾಷೆಯ ಮೂಲಕವೇ ನಡೆಸುವುದರಿಂದ ಭಾಷಾ ಕಲಿಕೆಯಲ್ಲಿ ತೊಂದರೆ ಉಂಟಾದರೆ ಮಗುವಿನ ಸರ್ವಾಂಗೀಣ ಬೆಳವಣಿಗೆ ಕುಂಠಿತಗೊಳ್ಳುತ್ತದೆ. ಮಗುವಿನ ಆತ್ಮವಿಶ್ವಾಸದ ಕೊರತೆಯೂ ಮೂಡಬಹುದು, ಆದ್ದರಿಂದ ಭಾಷಾ ಮನೋವೈಜ್ಞಾನಿಕ ನಿಯಮಗಳನ್ನು ಅರಿತುಕೊಂಡು, ಅವುಗಳನ್ನು ಅಳವಡಿಸಿಕೊಂಡು, ಬೋಧನೆಯಲ್ಲಿ ತೊಡಗಿದರೆ ಭಾಷಾ ಕಲಿಕೆ ಸುಲಭವಾಗಿ ಸಮರ್ಥವಾಗಿ ನಡೆಯುತ್ತದೆ.

**ಕೊನೆ ಟಿಪ್ಪಣಿಗಳು:**


1. ಕೃಷ್ಣಯ್ಯ ಎಂ. ಎಚ್. (1993). ಸಂಕ್ಷಿಪ್ತ ಕನ್ನಡ ಭಾಷೆಯ ಚರಿತ್ರೆ. ಸುವಿದ್ಯಾ ಪ್ರಕಾಶನ. ಬೆಂಗಳೂರು. ಪು.ಸಂ. 04
2. ಕೃಷ್ಣಯ್ಯ ಎಂ. ಎಚ್. (1993). ಸಂಕ್ಷಿಪ್ತ ಕನ್ನಡ ಭಾಷೆಯ ಚರಿತ್ರೆ. ಸುವಿದ್ಯಾ ಪ್ರಕಾಶನ. ಬೆಂಗಳೂರು. ಪು.ಸಂ. 05
3. ಶಂಕರಭಟ್ ಡಿ. ಎನ್. (2006). ಕನ್ನಡ ನುಡಿಯ ಬಗೆಗೆ ಚಿಂತನೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ. ಬೆಂಗಳೂರು. ಪು.ಸಂ. 07
4. ಅನಸೂಯ ವಿ. ಪರಗಿ. (2014). ಮಾತೃ ಭಾಷೆ ಕನ್ನಡ–ತತ್ವ ಮತ್ತು ಬೋಧನಾ ಮಾರ್ಗ. ವಿವೇಕ ಪ್ರಕಾಶನ. ಚಿಕ್ಕಬಳ್ಳಾಪುರ. ಪು.ಸಂ. 30
5. ಕೃಷ್ಣಯ್ಯ ಎಂ. ಎಚ್. (1993). ಸಂಕ್ಷಿಪ್ತ ಕನ್ನಡ ಭಾಷೆಯ ಚರಿತ್ರೆ. ಸುವಿದ್ಯಾ ಪ್ರಕಾಶನ. ಬೆಂಗಳೂರು. ಪು.ಸಂ. 08
6. ಅನಸೂಯ ವಿ. ಪರಗಿ. (2014). ಮಾತೃ ಭಾಷೆ ಕನ್ನಡ–ತತ್ವ ಮತ್ತು ಬೋಧನಾ ಮಾರ್ಗ. ವಿವೇಕ ಪ್ರಕಾಶನ. ಚಿಕ್ಕಬಳ್ಳಾಪುರ. ಪು.ಸಂ. 32
7. ಅನಸೂಯ ವಿ. ಪರಗಿ. (2014). ಮಾತೃ ಭಾಷೆ ಕನ್ನಡ–ತತ್ವ ಮತ್ತು ಬೋಧನಾ ಮಾರ್ಗ. ವಿವೇಕ ಪ್ರಕಾಶನ. ಚಿಕ್ಕಬಳ್ಳಾಪುರ. ಪು.ಸಂ. 34
8. ಮರುಳಯ್ಯ ಸಾ. ಶಿ. (1999). ಕನ್ನಡ ಭಾಷೆಯ ಚರಿತ್ರೆ. ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು. ಪು.ಸಂ. 06
9. ವೆಂಕಟಾಚಲ ಶಾಸ್ತ್ರೀ ಟಿ. ವಿ. (1990). ಹೊಸಗನ್ನಡ ವ್ಯಾಕರಣ. ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ. ಬೆಂಗಳೂರು. ಪು.ಸಂ. 15
10. ನಾರಾಯಣ ಕೆ. ವಿ. (2001). ಮತ್ತೆ ಭಾಷೆಯ ಸುತ್ತಮುತ್ತ. ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ. ಬೆಂಗಳೂರು. ಪು.ಸಂ. 112

11. ಅನಸೂಯ ವಿ. ಪರಗಿ. (2014). ಮಾತೃ ಭಾಷೆ ಕನ್ನಡ–ತತ್ವ ಮತ್ತು ಬೋಧನಾ ಮಾರ್ಗ. ವಿವೇಕ ಪ್ರಕಾಶನ. ಚಿಕ್ಕಬಳ್ಳಾಪುರ. ಪು.ಸಂ. 427 ರಿಂದ 432.

## ಪರಮಾರ್ಶನ ಗ್ರಂಥಗಳು:

1. ಕೃಷ್ಣಯ್ಯ ಎಂ. ಎಚ್. (1993). ಸಂಕ್ಷಿಪ್ತ ಕನ್ನಡ ಭಾಷೆಯ ಚರಿತ್ರೆ. ಸುವಿದ್ಯಾ ಪ್ರಕಾಶನ. ಬೆಂಗಳೂರು.
2. ಅನಸೂಯ ವಿ. ಪರಗಿ (2014). ಮಾತೃ ಭಾಷೆ ಕನ್ನಡ–ತತ್ವ ಮತ್ತು ಬೋಧನಾ ಮಾರ್ಗ. ವಿವೇಕ ಪ್ರಕಾಶನ. ಚಿಕ್ಕಬಳ್ಳಾಪುರ.
3. ಶ್ರೀಕಂಠಯ್ಯ ತೀ. ನಂ. (1992). ಕನ್ನಡ ಮದ್ಯಮ ವ್ಯಾಕರಣ. ಗೀತಾ ಬುಕ್ ಹೌಸ್. ಮೈಸೂರು.
4. ನಾರಾಯಣ ಕೆ. ವಿ. (2001). ಮತ್ತೆ ಭಾಷೆಯ ಸುತ್ತಮುತ್ತ. ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ. ಬೆಂಗಳೂರು.
5. ವೆಂಕಟಾಚಲ ಶಾಸ್ತ್ರೀ ಟಿ. ವಿ. (1990). ಹೊಸಗನ್ನಡ ವ್ಯಾಕರಣ. ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ. ಬೆಂಗಳೂರು.
6. ಮರುಳಯ್ಯ ಸಾ. ಶಿ. (1999). ಕನ್ನಡ ಭಾಷೆಯ ಚರಿತ್ರೆ. ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು.
7. ಶಂಕರಭಟ್ ಡಿ. ಎನ್. (2006). ಕನ್ನಡ ನುಡಿಯ ಬಗೆಗೆ ಚಿಂತನೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ. ಬೆಂಗಳೂರು.
8. ಶಂಕರಭಟ್ ಡಿ. ಎನ್. (1999). ಕನ್ನಡ ಶಬ್ದ ರಚನೆ. ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್. ಬೆಂಗಳೂರು.